2. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ 42ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಅಧ್ಯಕ್ಷರೇ ಶ್ರೀ ಬಿ. ಶ್ರೀರಾಮುಲು ಅವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ – ಗೈರು – ಅವರ ಪರವಾಗಿ

ಶ್ರೀ ಎಂ.ಪಿ. ಪ್ರಕಾಶ್ :– ಅಧ್ಯಕ್ಷರೇ, ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು :– ಮುಂದಿಡಲಾಯಿತು.

2. ಅರ್ಜಿಗಳನ್ನೊಪ್ಪಿಸುವುದು.

ಅಧ್ಯಕ್ಷರು :– ಶ್ರೀ ಹೆಚ್.ಡಿ. ಬಸವರಾಜು ಅವರ ಹೆಸರಿನ ಮುಂದಿರುವ ಅರ್ಜಿಯನ್ನು ಶ್ರೀಯುತರು ಗೈರು ಇರುವುದರಿಂದ ಅವರ ಪರವಾಗಿ ಸಭೆಯ ಮುಂದೆ ಒಪ್ಪಿಸಲಾಗಿದೆ.

3. ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ವಿಷಯ :– ರಾಜ್ಯದಲ್ಲಿ ಬರಗಾಲ ಉಂಟಾಗಿರುವ ಬಗ್ಗೆ ಮತ್ತು ಕಬ್ಬು ಬೆಳೆದ ರೈತರು ಕಷ್ಟದಲ್ಲಿರುವ ಬಗ್ಗೆ.

ಶ್ರೀ ಧರಂ ಸಿಂಗ್ (ವಿರೋಧ ಪಕ್ಷದ ನಾಯಕರು) :– ಅಧ್ಯಕ್ಷರೇ ಮೇಲ್ಮನೆ ಸಹ ನಡೆದಿದೆ. ಒಂದು ವೇಳೆ ಯಾವುದೇ ಸಚಿವರು ಬೇರೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಅವರ ಪರವಾಗಿ ಕಾಗದಪತ್ರವನ್ನು ಬೇರೆಯವರು ಮಂಡಿಸಬಹುದು. ಬೀದರ್‌ನಲ್ಲಿ ವಿಕಾಸಯಾತ್ರೆ ಏನಿದೆ ಅಲ್ಲಿಗೆ ಎಲ್ಲಾ ಸಚಿವರ ದಂಡು ದಂಡೆ ಹೋಗಿದೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಉಪ ಮುಖ್ಯಮಂತ್ರಿ ಯಡಿಯೂರಪ್ಪನವರೂ ಅಲ್ಲಿದ್ದಾರೆ. ತಮ್ಮೆನುರಿಗೇ ಸಭೆಯಾಗಿದೆ, ಅವರು ಏನು ಹೇಳಿದ್ದರು, 9, 10 ನಮಗೆ ರಜೆ ಕೊಡಬೇಕು, ರಾಜನಾಥಸಿಂಗ್ ಬರುತ್ತಾರೆ, ನಾನೂ ಸಭೆಯಲ್ಲಿ ಪಾಲ್ಗೊಳ್ಳಬೇಕು ಅಂತ. ಎಲ್ಲಾ ಪಕ್ಷಗಳ ಸದಸ್ಯರೂ ಸಚಿವರಿದ್ದಾಗ ಏನೋ ಒಂದೆರಡು ದಿವಸ ಅವರ ಕಾರ್ಯಕ್ರಮವಿದ್ದಾಗ ಹೋಗುತ್ತಾರೆ. ಇವತ್ತು ಬೀದರ್ ಬೇರೆ ಕಡೆಯಲ್ಲಾ ಹೇಳಿಕೆ ಕೊಡುತ್ತಿದ್ದಾರೆ. ವಿಕಾಸಯಾತ್ರೆ ಹೋಗುತ್ತಿದೆ. ಅಲ್ಲಿ ನನ್ನ ತಾಲ್ಲೂಕಿನಲ್ಲಿ

ಕೇಳಿದ್ದಾರೆ, ಕಬ್ಬು ಬೆಳೆಗಾರರು ಎಲ್ಲಾ ಕಡೆಗೆ ಮುತ್ತಿಗೆ ಹಾಕಿದರು. ಇಲ್ಲಿ ನಿಮಗೆ ಭಾಷಣ ಮಾಡಲು ಬಿಡುವುದಿಲ್ಲ ಅಂತ. ನನ್ನ ಕ್ಷೇತ್ರದಲ್ಲಿ ವಿಕಾಸಯಾತ್ರೆಯನ್ನು ತಡೆಹಿಡಿದಿದ್ದಾರೆ. ಮುಖ್ಯಮಂತ್ರಿಗಳೇ ನಿಮ್ಮ ಸಚಿವರಿಗೆ ಕಾರಣಾಂತರದಿಂದ ಬರಲು ಆಗಲಿಲ್ಲ ಅಂದರೆ ಒಪ್ಪುತ್ತೇವೆ. 35 ವರ್ಷದಿಂದ ಸದನದಲ್ಲಿ ನಾವು ನೋಡಿದ್ದೇವೆ. ಇವತ್ತು ಬೀದರ್ ರಾಯಚೂರುಗಳಲ್ಲಿ ವಿಕಾಸಯಾತ್ರೆಯಲ್ಲಿ ಪಾಲ್ಗೊಳ್ಳುವ ಕಾಲದಲ್ಲಿ ಅವರ ಪರವಾಗಿ ಮಂಡಿಸುವುದು ಸಮಂಜಸವಲ್ಲ. ಇದಕ್ಕೆ ತಾವು ಪರವಾನಗಿ ಕೊಡಬಾರದು. ಎಲ್ಲಾ ಮಂತ್ರಿಗಳೂ ಹೋಗಿದ್ದಾರೆ. ಸರ್ಕಾರದಲ್ಲಿ ಎರಡೂ ಪಕ್ಷಗಳು ಇಬ್ಭಾಗವಾಗಿದೆ ಅನ್ನುವಂತೆ ಮುಖ್ಯಮಂತ್ರಿಗಳೇ ಸೂಚನೆ ಕೊಡುವುದು ಮತ್ತು ವಿಕಾಸಯಾತ್ರೆ ಮೂಲಕ ರಾಜ್ಯದಲ್ಲಿ BJP ಗೆ ಶಕ್ತಿ ಕೊಡುವ ರೀತಿ ನಡೆದಿದೆ. ನಾವು ಯಾವುದಕ್ಕೆ ಬಂದಿದ್ದೇವೆ ಇಲ್ಲಿ, ಇವತ್ತು ಕಬ್ಬು ಬೆಳೆಗಾರರ ಬಗ್ಗೆ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ. ಅಲ್ಲಿ ಇರಬೇಕಾಗಿದೆ. ಬರಗಾಲದ ಬಗ್ಗೆ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ ಏನೇನು ಕೆಲಸ ಕಾರ್ಯಗಳು ಆಗುತ್ತವೆ, ರಾಜ್ಯದಲ್ಲಿ ಎಲ್ಲಾ ಕಡೆಯೂ ಕುಡಿಯುವ ನೀರಿಗೆ ತೊಂದರೆಯಿದೆ, ಯಾರಿಗೆ ಕೇಳಬೇಕು? ಸಭೆ ನಡೆಯುವ ಕಾಲದಲ್ಲಿ ಈ ತರಹದ ಉದ್ಧಟನದ ನಾವು ಯಾವಾಗಲೂ ಕೂಡ ನೋಡಿಲ್ಲ. ಇದಕ್ಕೆ ನೀವು ಕಡಿವಾಣ ಹಾಕಬೇಕು.

ಶ್ರೀ ಜಗದೀಶ್ ಶೆಟ್ಟರ್ :– ಅಧ್ಯಕ್ಷರೇ ವಿಕಾಸಯಾತ್ರೆಯನ್ನು BJP ಯವರು ನಾವು ಏನು ಕೈಗೊಂಡಿದ್ದೇವೆ ಇದು ಮೊದಲೇ ನಿಗದಿಯಾದ ಕಾರ್ಯಕ್ರಮ. 5ನೇ ತಾರೀಖಿನವರೆಗೆ ಅಧಿವೇಶನ ಇತ್ತು. ಆಮೇಲೆ extend ಆಯಿತು. ಅವತ್ತು BAC ಸಭೆಯಲ್ಲಿ ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು. ತಾವು ಹೇಳಿದಂತೆ 11ರಂದು ಹಕ್ಕುಚ್ಯುತಿ ಮಂಡಿಸಿದ ದಿವಸ ಬಂದು ಹೋದರು. 13ನೇ ತಾರೀಖಿನವರೆಗೆ ಈ ಯಾತ್ರೆ ಹಾಕಿಕೊಂಡಿದ್ದೇವೆ ಅಂತಲೂ ಆ ಸಂದರ್ಭದಲ್ಲಿ ಹೇಳಿದರು. ಇವತ್ತು ನಮ್ಮ ಬಿಲ್‌ಗಳಿವೆ, ನಾನಿದ್ದೇನೆ, ಈಶ್ವರಪ್ಪನವರಿದ್ದಾರೆ, ಉದಾಸಿಯವರಿದ್ದಾರೆ, ಹೀಗೆ ಅವಶ್ಯಕತೆಯಿರುವ ಸಚಿವರು ಸದನದಲ್ಲಿದ್ದೇವೆ. ಬರಗಾಲದ ಬಗ್ಗೆ ಚರ್ಚೆ ಮಾಡೋಣ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚಿಸೋಣ. ಅದಕ್ಕೆ ಮುಖ್ಯಮಂತ್ರಿಗಳೂ ಇಲ್ಲೇ ಇದ್ದಾರೆ. ಅದಕ್ಕೆ ಸರ್ಕಾರ ಏನು ನಿರ್ಣಯ ಮಾಡಿ ಪರಿಹಾರ ಹುಡುಕುವ ಕೆಲಸ ನಾವು ಮಾಡುತ್ತೇವೆ. ಆದ್ದರಿಂದ ಒಂದಕ್ಕೊಂದು ಹೋಲಿಸುವುದು ಸರಿಯಲ್ಲ. ಆ ರೀತಿ ವ್ಯಂಗ್ಯವಾಗಿ ಹೇಳುವುದು ಸರಿಯಲ್ಲ, ಉದ್ಧಟನದ ಎಂಬ ಮಾತು ಬಳಸಿದ್ದು ಸರಿಯಲ್ಲ. ಇವತ್ತು ನಾವು ಜನರ ಬಳಿಗೆ ಹೋಗುತ್ತಾ ಇರುವುದರಿಂದ ನಿಮಗೆ ತೊಂದರೆಯಾಗುತ್ತಿದೆ.

(ಗೊಂದಲ)

ಶ್ರೀ ಧರಂ ಸಿಂಗ್ :-- ವಿಕಾಸಯಾತ್ರೆಯನ್ನು ಇವತ್ತು ತಡೆಹಿಡಿದಿದ್ದೇವೆ. ಸದಾನಂದಗೌಡರಿಗೆ ಅಲೋ ಮಾಡಲಿಲ್ಲ, ಯಡಿಯೂರಪ್ಪನವರು ಹೋಗಿದ್ದರೆ ಅದೇ ಆಗುತ್ತಿತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- BAC ಯಲ್ಲಿ ಆ ರೀತಿ ತೀರ್ಮಾನವಾಗಿಲ್ಲ. ಯಾಕೆ ಆ ರೀತಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಒಂದು ದಿವಸಕ್ಕೆ ನಾವು ಅನುಮತಿ ಕೊಟ್ಟಿದ್ದು. ಸದನ ನಡೆಯುವಾಗ ಅವರು ವಿಕಾಸಯಾತ್ರೆಯನ್ನು ಮಾಡಿಕೊಳ್ಳಲು ನಾವು ಅನುಮತಿ ಕೊಡಲಿಲ್ಲ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ಅಧ್ಯಕ್ಷರೇ ಜೇವರ್ಗಿಯೊಳಗೆ ಅಷ್ಟೊಂದು ಕಬ್ಬು ಬೆಳೆಯಲು ಕಾರಣವೇನು? ಕಾರ್ಖಾನೆಗೆ ಅನುಮತಿ ಇಲ್ಲದೆ ಅಡಿಗಲ್ಲು ಹಾಕಿದ ಪರಿಣಾಮವಾಗಿ 20–30 ಸಾವಿರ ಟನ್ ಕಬ್ಬು ಬೆಳೆಯುತ್ತಿದ್ದ ಕಡೆ 2 ಲಕ್ಷ ಟನ್ ಕಬ್ಬು ಬೆಳೆದರು. ರೈತರು ಆ ಕಾರ್ಖಾನೆ ಪ್ರಾರಂಭವಾಗುತ್ತದೆ ಅಂತ ಕನಸು ಕಾಣಲು ಕಾರಣವೇನು? ಅನುಮತಿಯಿಲ್ಲದೆ ಅಡಿಗಲ್ಲು ಹಾಕಿದ್ದರಿಂದ ರೈತರು ಕಬ್ಬು ಬೆಳೆದರು. ಕಾರ್ಖಾನೆಯಿಲ್ಲದೆ ಕಬ್ಬು ಬೆಳೆದರೆ ಸಮಸ್ಯೆ ಏನಾಗುತ್ತದೆ ಅಂತ ಆಲೋಚನೆ ಮಾಡಬೇಕಾಗಿತ್ತು. ಈ ಸಮಸ್ಯೆ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಿ.

ಶ್ರೀ ಧರಂ ಸಿಂಗ್ :-- ಯಾರದೋ ಮಾತು ಕೇಳಿ ಮಾತನಾಡಬೇಡಿ. ಅಧಿಕೃತವಾಗಿ ಈಗಾಗಲೇ ಕಲ್ಬುರ್ಗಿಯಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದೆ. ನಾನು ಸುಳ್ಳು ಭರವಸೆ ಕೊಡುವ ರಾಜಕಾರಣಿಯಲ್ಲ. ಇವತ್ತು ರೈತರಿಗೇನು ಅನ್ಯಾಯವಾಗಿದೆ ಅದರ ಬಗ್ಗೆ ಮಾತನಾಡುತ್ತೇನೆ. ನಾಳೆ ಕೊಡಿ ಬಿಡಿ ನಿಮಗೆ ಬಿಟ್ಟಿದ್ದು.

ಶ್ರೀ ಸಿ.ಎಂ. ಉದಾಸಿ :- ಆಸೆ ಹುಟ್ಟಲು ಕಾರಣರಾಗಿದ್ದು ಯಾರು? ಯಾವಾಗಲೂ ನಾವು ಸುಳ್ಳು ಭರವಸೆ ಹೇಳಿ ಕಬ್ಬು ಬೆಳೆಯಲು ಅವಕಾಶ ಮಾಡಿಕೊಡಬಾರದಿತ್ತು. ನೀವು ಹತ್ತು ವರ್ಷದ ದಾಖಲೆಯನ್ನು ಬೇಕಾದರೆ ತರಿಸಿ ನೋಡಿ.

(ಗೊಂದಲ)

ಶ್ರೀ ಧರ್ಮಸಿಂಗ್ :- ನಾವು ರೈತರ ಸಮಸ್ಯೆಗೆ ಸ್ಪಂದಿಸುತ್ತೇವೆ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ಆ ಕಾರ್ಖಾನೆಗೆ ಅನುಮತಿ ಇಲ್ಲದೇ ಅಡಿಗಲ್ಲನ್ನು ಹಾಕಿದ್ದರ ಪರಿಣಾಮ ಜನರು ಆಸೆ ಬಿದ್ದು ಕಬ್ಬು ನುರಿಯಬಹುದು ಎಂದು ಹೇಳಿ ಕಬ್ಬನ್ನು ಹಾಕಿದ್ದಾರೆ. ಆ ರೀತಿ ಕಬ್ಬು ಬೆಳೆದ ಪರಿಣಾಮವಾಗಿ ರೈತರಿಗೆ ಸಮಸ್ಯೆಯಾಗಿದೆ.

(ಗೊಂದಲ)

ಶ್ರೀ ಧರ್ಮಸಿಂಗ್ :- ಉದಾಸಿಯವರು ಹೇಳಿದ್ದು ಇದು ರೆಕಾರ್ಡ್‌ಗೆ ಹೋಗಬೇಕು.

ಅಧ್ಯಕ್ಷರು :- ಆಯಿತು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :- ನಮ್ಮ ಜಿಲ್ಲೆಯಲ್ಲೇ ಒಂದು ಲಕ್ಷ ಟನ್ ಕಬ್ಬನ್ನು ಬೆಳೆದಿದ್ದಾರೆ. ಎಲ್ಲ ಕಡೆಗೆ ಬೆಳೆದಿದ್ದಾರೆ. ಜೇವರ್ಗಿ ಎಂದು ಅಲ್ಲ. ನಮ್ಮ ಜಿಲ್ಲೆಯಲ್ಲೇ ಒಂದು ಲಕ್ಷ ಟನ್ ಕಬ್ಬು ಹೆಚ್ಚು ಇದೆ.

ಶ್ರೀ ಧರ್ಮಸಿಂಗ್ :- ನಾನು ಕೇವಲ ಜೇವರ್ಗಿಯಲ್ಲಿದೆ ಎನ್ನುವ ಮಾತನ್ನು ಹೇಳುವುದಿಲ್ಲ. ಇಡೀ ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ಆದಂಥ ಅನ್ಯಾಯ, ಇಡೀ ರಾಜ್ಯದಲ್ಲಿ ಕಬ್ಬು ಬೆಳೆಗಾರರು ಏನು ಸಂಕಷ್ಟದಲ್ಲಿದ್ದಾರೆ, ಬೆಳಗಾಂ ಅಧಿವೇಶನದಿಂದ ಹಿಡಿದು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು :- ಚರ್ಚೆ ಆಯಿತಲ್ಲ ಸಾರ್, ಅವರನ್ನು ನಾಲ್ಕುವರೆ ಗಂಟೆಗೆ ಕರೆದಿದ್ದಾರಲ್ಲ.

ಶ್ರೀ ಧರ್ಮಸಿಂಗ್ :- ಇವತ್ತಿನ ದಿವಸ ಎಲ್ಲ ಬಿಲ್‌ಗಳನ್ನು ಬದಿಗೊತ್ತಿ ಅಧಿವೇಶನ ನಾಳೆ ಕೊನೆಯ ದಿನ ಇದೆ. ಇವತ್ತು ಬರದ ಬಗ್ಗೆ ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಗಂಭೀರವಾದ ಸಮಸ್ಯೆ ಕರ್ನಾಟಕ ರಾಜ್ಯದಲ್ಲಿ ಎಲ್ಲ ಕಡೆಗೆ ಇದೆ. ಇದು ಕೇವಲ ವಿರೋಧ ಪಕ್ಷದವರ ಸಮಸ್ಯೆ ಅಲ್ಲ, ಇಡೀ ಸದನಕ್ಕೆ ಸಂಬಂಧಪಟ್ಟ ಸಮಸ್ಯೆ ಇದು. ಈ ರಾಜ್ಯದ ಎಲ್ಲ ಕ್ಷೇತ್ರದಲ್ಲಿ ಕೂಡ ಕುಡಿಯುವ ನೀರಿನ ಸಮಸ್ಯೆ ಇದೆ. ಮೊನ್ನೆ ಕೂಡ ಮುಖ್ಯಮಂತ್ರಿಗಳು ಸಭೆಯನ್ನು ಕರೆದು

ಚರ್ಚಿಸಿದ್ದಾರೆ. ಎಷ್ಟು ಹಣ ಬಿಡುಗಡೆ ಮಾಡಿದ್ದೇವೆನ್ನುವ ಮಾತನ್ನು ಹೇಳಿದ್ದಾರೆ. ಕೇಂದ್ರಕ್ಕೆ ಒಂದು ನಿಯೋಗ ಹೋಗಬೇಕೆಂದು ಹೇಳಿದ್ದಾರೆ, ಒಪ್ಪುತ್ತೇನೆ. ಮತ್ತೆ ಇದಕ್ಕೆ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದರ ಉಸ್ತುವಾರಿಯನ್ನು ನೋಡಿಕೊಳ್ಳುವವರಾಗಿದ್ದಾರೆ. ಅವರು ಕೂಡ ಸಭೆಯನ್ನು ಮಾಡಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, ಇವತ್ತು ಎಷ್ಟು ಹಣ ಜಿಲ್ಲಾಧಿಕಾರಿಗಳ ಬಳಿ ಇದೆ ಎಂದು ಹೇಳಿದ್ದಾರೆ. ಇವತ್ತು ಇದರ ಬಗ್ಗೆ ಒಂದು task force ಅನ್ನು ಮಾಡಬೇಕಾಗಿದೆ. ಇನ್ನು task force constitute ಆಗಿಲ್ಲ. ನಾಳೆ ಕೊನೆ ದಿನ. ಇವತ್ತು ನಾವು ಏಪ್ರಿಲ್ ತಿಂಗಳ ಮಧ್ಯದಲ್ಲಿದ್ದೇವೆ. ಇನ್ನು ಕೂಡ ಮೇ, ಜೂನ್‌ನಲ್ಲಿ ಆಗತಕ್ಕ ಅನಾಹುತಗಳನ್ನು ತಪ್ಪಿಸತಕ್ಕ ರೀತಿಯಲ್ಲಿ ಕೇಂದ್ರದಿಂದ ಬಂದ ಹಣವೆಷ್ಟು? ಕುಡಿಯುವ ನೀರಿಗಾಗಿ ಬಂದಂಥ ಹಣವೆಷ್ಟು? ಇವತ್ತು ಎಷ್ಟು ಬಿಡುಗಡೆಯಾಗಿದೆ? ಮತ್ತೆ ವಿಶೇಷವಾಗಿ ವಿದರ್ಭ ಪ್ಯಾಕೇಜ್‌ನಲ್ಲಿ 2689 ಕೋಟಿ ಹಣವನ್ನು ಬಿಡುಗಡೆ ಮಾಡಿ ಅದರಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕೆಂದು ಇದೆ. Employment Guarantee Scheme ನಲ್ಲಿ ಕೇಂದ್ರದಿಂದ ಬಂದ ಹಣ ಎಷ್ಟು ಅದರಲ್ಲಿ ಎಷ್ಟು utilize ಆಗಿದೆ, ಇವತ್ತು ಜನರು, ಕೂಲಿಕಾರರು ವಲಸೆ ಹೋಗುತ್ತಿದ್ದಾರೆ, ಅದಕ್ಕೆ ಎಲ್ಲವನ್ನು ಕೂಡ ಸ್ಪಷ್ಟವಾಗಿ ವಿಚಾರ ವಿಮರ್ಶೆ ಆಗಬೇಕಾಗಿದೆ. ನಾವೇನು ಇವತ್ತು ಸರ್ಕಾರದ ಮೇಲೆ ಬೇರೆ ತರಹದ ಒಂದು ಆರೋಪ ಮಾಡಿದ್ದೇವೆ. ಅದಕ್ಕೆ ಹೊಣೆ ಹೊರಿಸತಕ್ಕದ್ದಲ್ಲ. ಇದು ಪ್ರತಿಯೊಬ್ಬ ಶಾಸಕರಿಗೆ ತಮ್ಮ ತಮ್ಮ ಕ್ಷೇತ್ರದಲ್ಲಿ ಸಂಬಂಧಪಟ್ಟ ಸಮಸ್ಯೆಯಾದ ಕಾರಣ ನಾಳೆ ಅಧಿವೇಶನ ಕೊನೆ ದಿನ ಇದೆ. ಈ ಸದನದಲ್ಲಿ ಕೂಲಂಕುಷವಾಗಿ ಇದರ ಬಗ್ಗೆ ಚರ್ಚೆ ಆಗಬೇಕಾಗಿದೆ. ಅದಕ್ಕೆ ನಾನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. ಏಕೆಂದರೆ ಇವತ್ತು ಈಗಾಗಲೇ ಅವರು ಹೇಳಿರುವಂತೆ ಸಾವಿರಾರು ಕೋಟಿಗಿಂತಲೂ ಹೆಚ್ಚು ಹಣ ಕೇಂದ್ರದಿಂದ ಬಂದಿದೆ ಎಂದು ಹೇಳಿದ್ದಾರೆ. ಇವತ್ತು ತಾವು 400 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. ಖರ್ಚಾಗಿರುವುದು ಅಲ್ಲಿ 243 ಕೋಟಿ ಎಂದು ಹೇಳಿದ್ದೀರಿ. PD account ಜಿಲ್ಲಾಧಿಕಾರಿಗಳ ಬಳಿ ಇದೆ. ಇವತ್ತು ಪ್ರತಿ ಕ್ಷೇತ್ರದಲ್ಲಿ ಯಾವಾಗಲೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬೇಕಾದರೆ ಸರ್ಕಾರ ಯಾವಾಗಲೂ ಕೂಡ action plan prepare ಮಾಡಬೇಕು. ಇವತ್ತು ಸರ್ಕಾರ action plan prepare ಮಾಡಿಲ್ಲ. ಎಲ್ಲ ಜಿಲ್ಲಾಧಿಕಾರಿಗಳು ಪ್ರತಿಯೊಂದು problematic village ಗೆ ಹೋಗುವ ಕೆಲಸವನ್ನು ಅವರು ಮಾಡುತ್ತಿಲ್ಲ. ಅಧಿಕಾರಿಗಳು ಏಕೊ ಇವರ ಆದೇಶವನ್ನು ಮೀರುತ್ತಿದ್ದಾರೆ.

ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ನಾಳೆ ಅಧಿವೇಶನ ಕೊನೆಯ ದಿನವಾದ ಸಂದರ್ಭದಲ್ಲಿ ಇವತ್ತು ನಾನು ನಿಲುವಳಿ ಸೂಚನೆಯನ್ನು ತಂದಿದ್ದೇನೆ. ಇದರ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕು. ಸರ್ಕಾರದಿಂದ ಉತ್ತರವನ್ನು ಪಡೆಯಬೇಕು. ಮತ್ತು ಈ ಚರ್ಚೆಯಲ್ಲಿ ಎಲ್ಲ ಶಾಸಕರು ಕೂಡ ಪಾಲ್ಗೊಳ್ಳಲಿ. ನಮಗೇನು ಒಂದು political ಆದಿಯಾಗಿ ರಾಜಕಾರಣ ಮಾಡುವ ವಿಷಯವಲ್ಲ. ಇವತ್ತು ಜನರು ತೊಂದರೆಗೀಡಾಗಿದ್ದಾರೆ. ಎಲ್ಲಾ ಕಡೆ ಸಾಕಷ್ಟು ಕುಡಿಯುವ ನೀರಿನ ಹಾಹಾಕಾರ ಇದೆ. ಒಬ್ಬ journalist met me and told ಅಧಿವೇಶನ ನಡೆಯುತ್ತಿದೆ ಎಂದು ಹೇಳುತ್ತೀರಿ, ನಾನು report ಮಾಡಿ ಮನೆಗೆ ಹೋಗಿ ಎರಡು ಬಿಂದಿಗೆ ನೀರನ್ನು ತರುತ್ತೇನೆಂದು ಹೇಳಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಜಪಾನ್ ಬ್ಯಾಂಕಿನ ನೆರವಿನಿಂದ 3384 ಕೋಟಿ ರೂ.ಗಳನ್ನು ನಾವು ತಂದಿದ್ದೇವೆ. ಇದಕ್ಕೆ ಗುಲಾಂ ನಬಿ ಆಜಾದ್ ಅವರು ಕೇಂದ್ರದಲ್ಲಿ ಸಂಬಂಧಪಟ್ಟ ಮಂತ್ರಿಯಾದಾಗ ಅವರು ಕೂಡ foundation stone ಹಾಕಿದ್ದಾರೆ. ಎಲ್ಲ ಕೆಲಸಕಾರ್ಯಗಳ ಬಗ್ಗೆ ಕೂಲಂಕುಷವಾಗಿ ಚರ್ಚೆಯನ್ನು ಮಾಡೋಣ. ಇದು ಗಂಭೀರವಾದ ಪ್ರಶ್ನೆ. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ, ಇದಕ್ಕೆ ನಾನು ಜಗದೀಶ್ ಶೆಟ್ಟರ್ ಅವರಿಗೆ ಹೇಳಬೇಕು. We are public representatives. We have got bigger responsibility. ಇವತ್ತು ಇಂಥ ಸಮಸ್ಯೆಗಳ ಬಗ್ಗೆ ಗಂಭೀರವಾಗಿ ಚರ್ಚೆ ನಡೆಯತಕ್ಕ ಕಾಲದಲ್ಲಿ ರಾಜ್ಯದ ಉಪಮುಖ್ಯಮಂತ್ರಿಗಳು ಸದನದಲ್ಲಿ ಇರಲೇಬೇಕು. ಹಣಕಾಸಿನ ಸಚಿವರೂ ಇರಲೇಬೇಕು. ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಬೇಕು. ಪೊಳ್ಳು ಭರವಸೆಗಳನ್ನು ಕೊಟ್ಟು ನೀವು ಹೊರಗಡೆ ಹೋದರೆ ಸರಿ ಹೋಗುವುದಿಲ್ಲ. ಸದನದಲ್ಲಿ ಅವರು ಇರಲೇಬೇಕೆನ್ನುವ ಅಂಶವನ್ನು ಪ್ರಸ್ತಾಪ ಮಾಡಿದ್ದೇನೆ. ನಾನೇನು ಯಡಿಯೂರಪ್ಪನವರ ಬಗ್ಗೆ, ನಿಮ್ಮ ಬಗ್ಗೆ, ವಿಕಾಸ ಯಾತ್ರೆ ಬಗ್ಗೆ ನಾನು ಬಿಜೆಪಿ ಮೇಲೆ ಗದಾ ಪ್ರಹಾರ ಮಾಡತಕ್ಕಂಥದ್ದಲ್ಲ. ಅದಕ್ಕೆ ಜನರು ಇದ್ದಾರೆ. ಅವರು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಕಬ್ಬು ಬೆಳೆಗಾರರ ಸಮಸ್ಯೆ ಇವತ್ತು ಇದ್ದು ಅದನ್ನು ಬಗೆಹರಿಸಿ ಅವರಿಗೆ ಬೆಲೆಯನ್ನು ಕೊಡುತ್ತಿಲ್ಲ. ಇಲ್ಲಿ ಬಂದು ನೀವು ವಿಕಾಸ ಯಾತ್ರೆಯನ್ನು ಮಾಡುತ್ತಿದ್ದೀರಿ ಎಂದು ಹೇಳಿ ಧರ್ಮಸಿಂಗ್ ಅವರ ಮತಕ್ಷೇತ್ರದಲ್ಲಿ ವಿಕಾಸ ಯಾತ್ರೆಗೆ ತಡೆಹಿಡಿದಿದ್ದಾರೆ. ಇವತ್ತು ಎಲ್ಲ ಕಡೆಗೆ ಈ ರೀತಿ ಆಗಿದೆ. ಅದು ಜನಾಭಿಪ್ರಾಯ. ಅದಕ್ಕೆ ನಾನು ಹೇಳತಕ್ಕದ್ದು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅನುವು ಮಾಡಿಕೊಡಬೇಕು. ಇದರ ಬಗ್ಗೆ

ಚರ್ಚೆಯಾಗಬೇಕು. ಚರ್ಚೆಯಾದ ನಂತರ ತಾವು ಬಿಲ್‌ನ್ನು ತೆಗೆದುಕೊಳ್ಳಬಹುದೆಂದು ಹೇಳಿ ನಾನು ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು :– ಈಗ ಇದೇ ಅಧಿವೇಶನದಲ್ಲಿ....

ಶ್ರೀ ಎಂ.ಪಿ. ಪ್ರಕಾಶ್ :– ನಿಲುವಳಿ ಸೂಚನೆ admissibility ಮೇಲೆ ನಾನು ಮಾತನಾಡುತ್ತೇನೆ.

ಶ್ರೀ ಕೃಷ್ಣ ಭೈರೇಗೌಡ (ವೇಮಗಲ್) :– ಮಾನ್ಯ ಅಧ್ಯಕ್ಷರೇ, ಏನು ನಮ್ಮ ನಾಯಕರು ನಿಲುವಳಿ ಸೂಚನೆಯನ್ನು ತಂದಿದ್ದಾರೆ, ತುಂಬಾ ಅದು ಸಮಯೋಚಿತವಾಗಿದೆ. ಏಕೆಂದರೆ ಈ ಯುಗಾದಿ ಸಂದರ್ಭದಲ್ಲಿ ಏಪ್ರಿಲ್ ತಿಂಗಳಲ್ಲಿ ಸ್ವಲ್ಪ ಮಳೆ ಆಗತಕ್ಕಂಥದ್ದನ್ನು ಕಳೆದ ನಾಲ್ಕೈದು ವರ್ಷಗಳಿಂದ ನಾವು ಕಾಣುತ್ತಾ ಬಂದಿದ್ದೇವೆ. ಆದರೆ ಈ ಬಾರಿ ಆ ಮಳೆಯೂ ಸಹಾ ನಮಗೆ ಕೈಕೊಟ್ಟಿದೆ. ಏಕೆ ಈ ಬರದ ಬಗ್ಗೆ ಮತ್ತೆ ಇಷ್ಟು ಗಂಭೀರವಾದ ಚರ್ಚೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇವೆಂದರೆ ಬರಬೇಕಾದ ಮಳೆಯೂ ಸಹಾ ಕೈಕೊಟ್ಟಿರುವುದರಿಂದ ಅಲ್ಲಿ ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ. ನಮ್ಮ ಕೆಲವು ಜಿಲ್ಲೆಗಳಲ್ಲಂತೂ ಎರಡು ವರ್ಷದಿಂದ ಮಳೆಯಾಗಿಲ್ಲ. 2005ರ ನಂತರ ಮಳೆಯಾಗಿಲ್ಲ. ಅಲ್ಲಿ ಒಂದು ಕಡೆ ರೈತರು ಅವರಿಗೆ ಉದ್ಯೋಗ ಇಲ್ಲದಂಥ ಪರಿಸ್ಥಿತಿ ಒಂದು ಕಡೆಯಾದರೆ ರೈತರು ಬೆಳೆ ಬೆಳೆದು ಏನು ನಷ್ಟವನ್ನು ಅನುಭವಿಸುತ್ತಿದ್ದಾರೆ, ಅದು ಒಂದು ಸಮಸ್ಯೆಯಾದರೆ ಎಲ್ಲಕ್ಕಿಂತಲೂ ಗಂಭೀರವಾದುದು ಕುಡಿಯುವ ನೀರಿನ ಸಮಸ್ಯೆ. ನಿನ್ನೆ ಪತ್ರಿಕೆಯಲ್ಲೆಲ್ಲಾ ನೋಡಿದ್ದೇವೆ. ಇವತ್ತು ನಾವು ದೀರ್ಘವಾಗಿ ಚರ್ಚೆಯನ್ನು ಮಾಡಬೇಕಾಗುತ್ತದೆ. ನಿಲುವಳಿ ಸೂಚನೆಯನ್ನು ತಾವು ಅವಕಾಶವನ್ನು ಕೊಟ್ಟರೆ ದೀರ್ಘವಾಗಿ ಅಂಕಿ ಸಂಖ್ಯೆಗಳ ಜೊತೆ ಚರ್ಚೆಯನ್ನು ಮಾಡುತ್ತೇವೆ. ನನ್ನ ಒಂದೇ ಕ್ಷೇತ್ರ ಇವತ್ತು ಉದಾಹರಣೆಯನ್ನು ಕೊಟ್ಟು ಮಾತನಾಡುವುದಾದರೆ ಸುಮಾರು 320 ಊರಿಗೆ ಸುಮಾರು 150 ಊರಿನಲ್ಲಿ ಇವತ್ತು ಕುಡಿಯುವ ನೀರಿನ ಸಮಸ್ಯೆ ಇದೆ. ಇವತ್ತು ಕೊಡುತ್ತಿರುವ ಹಣವೆಲ್ಲ ಪಂಪ್, ಮೋಟಾರ್ ಇಂಥದ್ದಕ್ಕೆ ಕೊಡುತ್ತಿದ್ದಾರೆಯೇ ಹೊರತು ಕೊಳವೆ ಬಾವಿ ಕೊರೆಯುವುದಕ್ಕೆ ಹಣವನ್ನು ಕೊಡುತ್ತಿಲ್ಲ. ಕೊಳವೆ ಬಾವಿ ಕೊರೆದಿರುವುದು ಈಗಾಗಲೇ ನನ್ನ ಕ್ಷೇತ್ರದಲ್ಲಿ 50 ಲಕ್ಷ ರೂ. ಬಿಲ್ಸ್ ಬಾಕಿ ಇದೆ. ಇವೆಲ್ಲವುಗಳ ಬಗ್ಗೆ ಸ್ವಲ್ಪ ದೀರ್ಘವಾಗಿ ಚರ್ಚೆ ಆಗಬೇಕಾಗುತ್ತದೆ. ವಿಷಯ ಸಮಯೋಚಿತವಾಗಿದೆ. ರೈತರು ಭಾರೀ ಸಂಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿ

ಹಾಕಿಕೊಂಡಿದ್ದಾರೆ. ಹಾಗಾಗಿ ಪ್ರಾಥಮಿಕ ಶಿಕ್ಷಣ ಸಚಿವರು ಸಹಾ ಇವತ್ತೇನೋ ಅಪರೂಪಕ್ಕೆ ನಮ್ಮ ಮನೆಗೆ ಬಂದಿದ್ದಾರೆ. ಇವತ್ತು ನಮ್ಮ ಮನೆ ಮೇಲೆ ಕರುಣೆ ಇಟ್ಟು ಅವರು ಬಂದಿದ್ದಾರೆ. ಅವರು ಬರೀ ಶಿಕ್ಷಕರ ಕಡೆ ನೋಡುವುದಲ್ಲದೇ ನಮ್ಮ ಹಳ್ಳಿ ಮಟ್ಟದಲ್ಲಿ ಅವರಿಗೆ ಏನಾಗುತ್ತದೆ ಅವರಿಗೆ ಟೀಚರ್ಸ್ vote ಅನ್ನು ಹಾಕುತ್ತಾರೆ. ಇವರಿಗೆ ರೈತರು ಬಡವರು vote ಹಾಕುವುದಿಲ್ಲ. ಹಾಗಾಗಿ ಪಾಪ ಇದರ ಸಮಸ್ಯೆ ನಾವು ಸಹಾ ಅವರಿಗೆ ಸ್ವಲ್ಪ ವಿವರಣೆ ಮಾಡಿ ಅವರನ್ನು convince ಮಾಡಬೇಕಾಗುತ್ತದೆ. ದಯವಿಟ್ಟು ನೀವು ನಮಗೆ ಒಂದು ಅವಕಾಶವನ್ನು ಕೊಡಬೇಕಾಗುತ್ತದೆ. ಆದರೆ ನಾನು ವಿಷಯವನ್ನು ಹಗುರ ಮಾಡದೇ ಕೋಲಾರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಈ ಭಾಗದಲ್ಲಂತೂ ಕುಡಿಯುವ ನೀರಿಗೆ ಇವತ್ತು ಹಳ್ಳಿಗಳಲ್ಲಿ ಹೆಜ್ಜೆ ಇಡಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಈಗ ಯಾವ ಹಳ್ಳಿಗೆ ಹೆಜ್ಜೆ ಇಟ್ಟರೂ ಸಹಾ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಹಳ್ಳಿಗಳಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತುಂಬಾ ಗಂಭೀರವಾಗಿದೆ. ಸದನ ಇನ್ನೆರಡು ದಿನದಲ್ಲಿ ಮುಗಿಯುವ ಹಿನ್ನೆಲೆ ಇರುವುದರಿಂದ ದಯವಿಟ್ಟು ಈ ವಿಷಯಕ್ಕೆ ಆದ್ಯತೆಯನ್ನು ಕೊಟ್ಟು ನಿಲುವಳಿ ಸೂಚನೆಗೆ ಅವಕಾಶವನ್ನು ತಾವು ಮಾಡಿಕೊಡಬೇಕು. ಇಲ್ಲವೆಂದರೆ ಇದಾದ ನಂತರ ನಾವ್ಯಾರು ಕ್ಷೇತ್ರಗಳಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಅಲ್ಲಿ ಹೋಗುವುದು ಬಿಡುವುದು ಬೇರೆಯಾಗುತ್ತದೆ. ಆದರೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ :- ನಮ್ಮ ಕಡೆ ಏನು ಪರಿಸ್ಥಿತಿ ಇದೆಯೆಂಬುದು ತಮಗೂ ಅನುಭವಕ್ಕೆ ಬಂದಿದೆ.

ಅಧ್ಯಕ್ಷರು :- ನೀವು ಎಲ್ಲವನ್ನೂ ಮಾತನಾಡಿ ಬಿಟ್ಟಿರಿ.

ಶ್ರೀ ಡಿ.ಆರ್. ಪಾಟೀಲ್ :- ನಮ್ಮ ಕಡೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ಜನರಿಗೆ ಉದ್ಯೋಗ, ಈ ಮೂರಕ್ಕೂ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ನೀವು ಬಿಲ್ ಪಾಸ್ ಮಾಡಬೇಕು, ಅದಕ್ಕೆ ನಾವೇನಾದರೂ ತೊಂದರೆ ಕೊಡುತ್ತೇವೆಂಬ ಭಾವನೆ ನಿಮಗಿದ್ದರೆ, ಸಾಯಂಕಾಲ 4 ಗಂಟೆಗೆ ಬೇಕಾದರೆ, ನೀವು discussion ತೆಗೆದುಕೊಳ್ಳಿ. ಈಗ ಬಿಲ್ ತೆಗೆದುಕೊಳ್ಳಿ. ನಾವೇನೂ ಅದನ್ನು ಬೇಡವೆನ್ನುವುದಿಲ್ಲ. ಆದರೆ, ಬರ ಪರಿಹಾರ ಕೆಲಸಗಳ ಬಗ್ಗೆ

ಇವತ್ತು ಚರ್ಚೆಯಾಗಿ ಸರ್ಕಾರ ಒಂದು ನಿರ್ಣಯಕ್ಕೆ ಬರುವಂತಹ ವಾತಾವರಣವನ್ನು ಇಲ್ಲಿ ಸೃಷ್ಟಿಸಬೇಕು. ಅದಕ್ಕೋಸ್ಕರ, ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರ ಬಹಳ ಗಂಭೀರವಾದದ್ದು ಮತ್ತು ಬರಗಾಲದ ವಿಷಯದಲ್ಲಿ ಸರ್ಕಾರ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂದು ಕೇಳುವುದಕ್ಕೆ ಸದನದಲ್ಲಿರುವ ಎಲ್ಲಾ ಸದಸ್ಯರಿಗೂ ಹಕ್ಕು ಇದೆ. ಆದರೆ, ಇಲ್ಲಿ ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ, ನಿಲುವಳಿ ಸೂಚನೆ ನಮ್ಮ ಕಾರ್ಯ ಕಲಾಪಗಳ ನಡವಳಿಕೆಯ ನಿಯಮ 61 ರಡಿ 5ನೇ ಪರಂತುವಿನಲ್ಲಿ "ಅದೇ ಅಧಿವೇಶನದಲ್ಲಿ ಚರ್ಚೆಯಾಗಿರುವ ವಿಷಯದಲ್ಲಿ ಪುನಃ ಚರ್ಚೆಗೆ ನಿಲುವಳಿ ಸೂಚನೆ ಇರತಕ್ಕದ್ದಲ್ಲ". ಅಂದರೆ, ಇಲ್ಲಿ ನಮಗೆ 2,8 ಮತ್ತು 9ನೇ ತಾರೀಖುಗಳಂದು ಬರಗಾಲದ ವಿಷಯದ ಬಗ್ಗೆಯೇ ನಾವು ಚರ್ಚೆ ಮಾಡಿದ್ದೇವೆ. ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ, ಮಧ್ಯ ಮಧ್ಯ ನಾನೂ ಪ್ರವೇಶ ಮಾಡಿ ಉತ್ತರ ಕೊಟ್ಟಿದ್ದೇನೆ. ಈಗ ಬರಗಾಲದ ವಿಚಾರ ಗಂಭೀರವಾಗಿದೆ, ಅದರ ಬಗ್ಗೆ ಮಾತನಾಡಬೇಕೆಂದರೂ, ಅದು 60ನೇ ನಿಯಮಾವಳಿ ಪ್ರಕಾರ ನಿಲುವಳಿ ಸೂಚನೆ ರೂಪದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. "ಅದೇ ಅಧಿವೇಶನದಲ್ಲಿ ಚರ್ಚೆಯಾಗಿರುವ ವಿಷಯದ ಮೇಲೆ ಪುನಃ ಚರ್ಚೆಗೆ ನಿಲುವಳಿ ಸೂಚನೆ ತರತಕ್ಕದ್ದಲ್ಲ" ಆದ್ದರಿಂದ, ಇದು ಕೊನೆಯಿಲ್ಲದ ಪರಿಸ್ಥಿತಿಯುಂಟಾಗುತ್ತದೆ ಮತ್ತು ಅನೇಕ ವಿಚಾರಗಳನ್ನು ಪದೇ ಪದೇ ಹೇಳಬೇಕೆಂದು ಅನ್ನಿಸುವುದಿದ್ದರೆ, ನಿಗದಿತವಾಗಿರುವ ಕಾರ್ಯಕಲಾಪಗಳು ನಡೆಯುವುದಿಲ್ಲವೆನ್ನುವ ಕಾರಣಕ್ಕಾಗಿಯೇ ನಾವೆ ಈ ನಿಯಮಾವಳಿಯನ್ನು ರಚಿಸಿಕೊಂಡಿದ್ದೇವೆ. ಅದರ ಜೊತೆಗೆ, ಇದೇ ಪೀಠದಲ್ಲಿ ಕುಳಿತಂತಹ ತಮ್ಮಂತಹ ಹಿರಿಯರೆಲ್ಲರೂ ಮಾಡಿದಂತಹ ನಿರ್ಣಯಗಳಿವೆ. "Emergency, subject which is not in the nature of a sudden emergency, not entitled for admission as an Adjournment Motion." ಅತ್ಯಂತ ತುರ್ತಾಗಿ,... of a recent occurrence ಎಂತಲೂ ಹೇಳುತ್ತಾರೆ. ಈ ಬರಗಾಲ ನಿನ್ನೆ ಆಗಿರುವಂಥಾದ್ದಲ್ಲ. ಕಳೆದ 3–4 ತಿಂಗಳುಗಳಿಂದ ಪ್ರತಿ ವರ್ಷವೂ ಕೂಡ ಕನ್ನಡಿಗರಿಗೆ ಬೆನ್ನಲ್ಲೇ ಹುಟ್ಟಿದ ತಮ್ಮನಂತೆ ಈ ಬರಗಾಲ ಇದ್ದೇ ಇದೆ. ಅದರ ತೀವ್ರತೆ ಕಡಿಮೆಯಾಗಿದೆ ಅಥವಾ ಚರ್ಚೆ ಮಾಡಿದ್ದೇವೆ. ನಾವು ಅನೇಕ ಬಾರಿ ಈ ವಿಷಯವನ್ನು ತಿಳಿಸಿದ್ದೇವೆ. ಆ ಕಾರಣಕ್ಕಾಗಿ

ಯಾವುದಾದರೂ ಇಂತಹ ಒಂದು ನಿರ್ಣಯ ಮಾಡಬೇಕಾದಾಗ, "A sudden emergency of a recent occurrence," ಅಂತಹುದರ ಬಗ್ಗೆ ಮಾತ್ರ ನಾವು ಈ Adjournment Motion ತರುವುದಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿಯಾಗಿ, "Motion not raised at an earlier opportunity, not in order," ಯಾವಾಗ ಅವಕಾಶ ಇತ್ತೋ....

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಾವು insist ಮಾಡುವುದಿಲ್ಲ. Adjournment Motion ಕೆಳಗೇ ತೆಗೆದುಕೊಳ್ಳಬೇಕು, Rule 60ರ ಕೆಳಗೇ ತೆಗೆದುಕೊಳ್ಳಿರೆಂದು ನಾವೇನೂ ಹೇಳುತ್ತಿಲ್ಲ. Yes. We concede for a minute. ಈ ವಿಚಾರವನ್ನು ಈಗಾಗಲೇ ಈ ಅಧಿವೇಶನದಲ್ಲೇ ಚರ್ಚೆ ಮಾಡಿದ್ದೇವೆ. ತಾವು ತಾಂತ್ರಿಕವಾಗಿ ಪ್ರಸ್ತಾಪಿಸಿರುವ objection ಎಲ್ಲವೂ ಸರಿಯಿದೆ. ಅದಕ್ಕೆ ನಮ್ಮ ಒಪ್ಪಿಗೆ ಇದೆ. ನಾವು ಏನು ಹೇಳುತ್ತೇವೆಂದರೆ, ನಮ್ಮ ಕಡೆ ಕೃಷ್ಣ ಭೈರೇಗೌಡರು ಹೇಳಿದಂತೆ, ನಿನ್ನೆ ವಿಚಾರವನ್ನು ತಮಗೆ ಹೇಳುತ್ತೇನೆ. ಎರಡು sub divisions ಗೆ ಸಂಬಂಧಿಸಿದಂತೆ ಏಳು ಕೋಟಿ ರೂಪಾಯಿಗಳು ಬಾಕಿ ಇದೆ. ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡಿದ್ದಾರಲ್ಲ, ಆ rig ownersಗೆ ಎರಡೂ divisions ನಿಂದ ಏಳು ಕೋಟಿ ರೂಪಾಯಿಗಳಷ್ಟು ಬಾಕಿ ಇದೆ. ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಅವರು ಬರುತ್ತಿಲ್ಲ. ಕೆಲವು ಊರುಗಳಲ್ಲಿ dry up ಆಗಿಬಿಟ್ಟಿದೆ. ನೀರಿಗೆ ಅವರನ್ನು ಎಲ್ಲಿಗೆ ಹೋಗಿ ಎಂದು ಹೇಳೋಣ? Tankers ಇಲ್ಲ. ನಾವು ಏನು ಹೇಳುತ್ತಿದ್ದೇವೆಂದರೆ, ನಿಮ್ಮ ಗಮನವನ್ನು ಈ ತೀವ್ರತೆ ಕಡೆಗೆ ಸೆಳೆಯುವುದು ನಮ್ಮ ಉದ್ದೇಶವೇ ಹೊರತು....

ಶ್ರೀ ಎಂ.ಪಿ. ಪ್ರಕಾಶ್ :– ಖಂಡಿತವಾಗಿಯೂ ನಾನು ಒಪ್ಪುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಹೇಗಾದರೂ ಮಾಡಿ. ನಾನು ಹೇಳುವುದೇನೆಂದರೆ, ಚರ್ಚೆಯೇ ಬೇಡ. ಮಾನ್ಯ ಮುಖ್ಯಮಂತ್ರಿಗಳು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ನಿನ್ನೆ CEO ಹತ್ತಿರ ನಾನು ಕೇಳಿದೆ. ಬಹಳ ಹೆಚ್ಚೆಂದರೆ, ನಮಗೆ 3 ಕೋಟಿ ರೂಪಾಯಿಗಳು ಬರಬಹುದೆಂದರು. ಒಂದೂವರೆ ಕೋಟಿ, ಒಂದೂವರೆ ಕೋಟಿ ರೂಪಾಯಿಗಳು ಎರಡೂ divisionsಗೆ ಹೋಗುತ್ತದೆ. At least, ನೀವು ಒಂದು arrangement ಮಾಡಿ 'ಆ ಒಂದೂವರೆ ಕೋಟಿಯನ್ನು ತಲುಪಿಸಿ, ಉಳಿದ

ದುಡ್ಡನ್ನು payment ಮಾಡುತ್ತೇವೆ, ಹೊಸ points ಎಲ್ಲೆಲ್ಲಿ ಅಗತ್ಯವಿದೆಯೊ ಅಲ್ಲಿ ಡ್ರಿಲ್ ಮಾಡಿಬಿಡಿ' ಎಂದು ಹೇಳಿ. ಇದು ಕುಡಿಯುವ ನೀರಿನ ವಿಚಾರ

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ತಮಗೇ ಗೊತ್ತಿದೆ. ತಾಂತ್ರಿಕವಾ ಇದು ಬರುವುದಿಲ್ಲವೆಂದಾಗ, ನಿಯಮ 61ರ ಕೆಳಗೆ ಇದನ್ನು ನಿಲುವಳಿ ಸೂಚನೆಯಾ ತಂದಿದ್ದಕ್ಕಾಗಿ ನಾವು ಆಕ್ಷೇಪಣೆ ಎತ್ತಿದ್ದೇವೆಯೇ ವಿನಾ ತಾವು ಬರಗಾಲದ ವಿಚಾರದ ಚರ್ಚೆ ಮಾಡಬಾರದೆಂದೇನೂ ಅಲ್ಲ. ಅದಕ್ಕೆ ಸಂಬಂಧಿಸಿದಂತೆ ಚರ್ಚೆಯಾ ನಂತರ ತಮಗೆ ಶೂನ್ಯ ವೇಳೆಯಲ್ಲಿ ಅವಕಾಶವಿದೆ ಮತ್ತು ಬೇರೆ ಬೇ ಸಂದರ್ಭಗಳಲ್ಲಿಯೂ ತಾವು ಮಾತನಾಡಿದ್ದೀರಿ. ಈ ಎಲ್ಲಾ ಹಿನ್ನೆಲೆಯಲ ಮಾತನಾಡುವುದಕ್ಕೆ ಅವಕಾಶವಿದೆ. ಅಲ್ಲಿಗೂ ಕೂಡ ತಾವು ಇದರ ಬಗ್ಗೆ ಚರ್ಚೆ ಮಾಡಬಹುದೆಂದರೆ, ಮಾನ್ಯ ಅಧ್ಯಕ್ಷರ ಒಪ್ಪಿಗೆ ಪಡೆದುಕೊಂಡು ತಾವು ನಾಳೆ ಇ ವಿಚಾರದಲ್ಲಿ ಮಾತನಾಡಿ. ನಾವೇನಾದರೂ ಅದರ ಬಗ್ಗೆ ಹೇಳುವುದಕ್ಕೆ ಬರುತ್ತ ಏಕೆಂದರೆ, ಇವತ್ತು ವಿಧೇಯಕಗಳು ಸಂಪೂರ್ಣವಾಗಿ ಪಾಸಾಗಬೇಕು, ಅಧ್ಯಕ್ಷ ನಾಳೆ ಒಂದು ದಿವಸ ಇರತಕ್ಕಂಥಾದ್ದು....

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಚರ್ಚೆ ಬೇಡವೇ ಬೇಡ. ನಾ ತಮಗೆ ಏನು ಹೇಳುತ್ತೇನೆಂದರೆ, ಅಧಿಕಾರಿ ನಿಮ್ಮ ಕೈಯಲ್ಲಿದೆ. ನಾವು ನಡ ಅಳಲು ತೋಡಿಕೊಂಡಿದ್ದೇವೆ, ಸಮಸ್ಯೆ ಹೇಳಿದ್ದೇವೆ, ಚರ್ಚೆ ಮಾಡಿ ಏನು ಲಾಭ ನಾವೆಲ್ಲರೂ ಚರ್ಚೆಯಲ್ಲಿ ಪಾಲ್ಗೊಂಡೆವು ಎಂದು ಪತ್ರಕರ್ತರು ಬರೆಯುವುದ ಬಿಟ್ಟು, ತಾವು ಮಂಜೂರು ಮಾಡಿಕೊಟ್ಟು ಬಿಡಿ.

ಶ್ರೀ ಎಂ.ಪಿ. ಪ್ರಕಾಶ್ :– ನಿಮಗೇನಾದರೂ ವಿರೋಧ ಇದೆಯೋ ನನಗೆ ಗೊತ್ತಿಲ್ಲ. ಏಕೆಂದರೆ, ನಾಯಕರು ಹೇಳಿರುವುದು ಚರ್ಚೆ ಆಗಿಯೆ ತೀರಬೇಕೆಂದು ಹೇಳಿದ್ದಾರೆ. ಮಾನ್ಯ ಕೃಷ್ಣ ಭೈರೇಗೌಡರು ಹೇಳಿದ್ದು, ಚರ್ಚೆ ಆಗಿಯೇ ತೀರಬೇಕೆಂದು.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನೀವಾದರೆ, ಸ್ವಲ್ಪ ಹಿಂದು–ಮುಂದ ಆಲೋಚನೆ ಮಾಡುತ್ತೀರಿ. ರಾಮಕೃಷ್ಣ ಹೆಗಡೆಯವರಿಂದ ಮೊದಲ್ಗೊಂಡು ನೇರವಾ ಮುಖಕ್ಕೆ ಮುಖ attack ಮಾಡಿದವನು, ವಿರೋಧ ಮಾಡಿದವನು ನಾನು. ನಾ ವಿರೋಧ ಮಾಡಬೇಕಾಗಿದ್ದರೆ, ಗುಟ್ಟಾಗಿ, ಮುಗುಮ್ಮಾಗಿ ಮಾಡುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– In the lighter way, sir.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಿಮಗೆ ಸ್ವಲ್ಪ ಅಂಜಿಕೆ ಹೆಚ್ಚು. ಆದರೂ ಪರವಾಗಿಲ್ಲ. ವಿಷಯಾಂತರವಾಗುವುದು ಬೇಡ. ದಯವಿಟ್ಟು ಕುಡಿಯುವ ನೀರಿಗೆ ಏನು ಬೇಕೋ ಅದನ್ನು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :– In the lighter way. ಏಕೆಂದರೆ,...

ಶ್ರೀ ಕೃಷ್ಣ ಬೈರೇಗೌಡ :– ನಾವು ಹೇಳಿದ್ದು. ಚರ್ಚೆಯಾಗಿ ಚರ್ಚೆ ಮಾಡುವುದಲ್ಲ. ಪರಿಹಾರಕ್ಕಾಗಿ ಚರ್ಚೆ ಮಾಡೋಣ.

ಶ್ರೀ ಎಂ.ಪಿ. ಪ್ರಕಾಶ್ :– ಆಗಬಹುದು ಸರ್.

ಶ್ರೀ ಕೃಷ್ಣ ಬೈರೇಗೌಡ :– ಚರ್ಚೆಯಾಗದಿದ್ದರೂ ಪರವಾಗಿಲ್ಲ. ನಮಗೆ ಪರಿಹಾರ ಬೇಕು. ಪರಿಹಾರ ಕೊಟ್ಟು ನೀವು ಒಳ್ಳೆಯ ಹೆಸರು ಪಡೆದುಕೊಳ್ಳಿರೆಂಬುದು ನಮ್ಮ ಹಾರೈಕೆ, ಅಷ್ಟೇ.

ಶ್ರೀ ಎಂ.ಪಿ. ಪ್ರಕಾಶ್ :– ಎಲ್ಲರೂ ಕೂಡ ಮಾಡುತ್ತಿರುವುದು ಅದೇ ಕೆಲಸಕ್ಕೆ. ಸನ್ಮಾನ್ಯ ಅಧ್ಯಕ್ಷರೆ, ನಾಳೆ ಬೇಕಾದರೆ, ಯಾವುದೇ ರೂಪದಲ್ಲಿ ತಮ್ಮ ಒಪ್ಪಿಗೆ ಪಡೆದುಕೊಂಡು ಬರಗಾಲದ ಮೇಲೆ ಮಾತನಾಡಿ, ಕಂದಾಯ ಸಚಿವರಿದ್ದಾರೆ, ನಾವಿದ್ದೇವೆ, ಇದ್ದಂತಹವರು ಅದಕ್ಕೆ ಖಂಡಿತವಾಗಿಯೂ ಉತ್ತರ ಕೊಡುತ್ತೇವೆ. ಹಣ ಬಿಡುಗಡೆ ಮಾಡಿಸುತ್ತೇವೆ. ಉಪಮುಖ್ಯಮಂತ್ರಿಗಳು ಇಲ್ಲದೇ ಇದ್ದರೂ ಮಾನ್ಯ ಮುಖ್ಯಮಂತ್ರಿಗಳಿಂದ ಜವಾಬ್ದಾರಿಯಿಂದ ಹಣ ಬಿಡುಗಡೆ ಮಾಡಿಸತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ. ಆದರೆ, ಈಗ ವಿಧೇಯಕಗಳನ್ನು ದಯವಿಟ್ಟು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :– ನಾವು ತಾಂತ್ರಿಕವಾಗಿ ನಿಲುವಳಿ ಸೂಚನೆ ಕೊಡಬೇಕಾಗಿತ್ತು ಮತ್ತು recent occurrence ಎಂದು ಹೇಳಿದ್ದು, ಅದೆಲ್ಲವೂ ಬೇರೆ. ರಾಜ್ಯದ 134 ತಾಲ್ಲೂಕುಗಳಲ್ಲಿ ಏನಾಗಿದೆ, ಅದರ ಬಗ್ಗೆ ಎಲ್ಲರೂ ಕೂಡ ಚರ್ಚೆಯಲ್ಲಿ ಭಾಗವಹಿಸಿ, ಇಂತಹ ಪರಿಸ್ಥಿತಿಯಲ್ಲಿ ನಿರ್ದಿಷ್ಟವಾದ ಉತ್ತರ ಪಡೆದುಕೊಳ್ಳಬೇಕೆಂಬ ರೀತಿಯಿಂದ ಹೆಚ್ಚಿನ ಹಣವನ್ನು ರಮೇಶ್‌ಕುಮಾರ್‌ರವರ ಜಿಲ್ಲೆಗೆ ಬಿಡುಗಡೆ ಮಾಡಬೇಕಾಗಿದೆ. ನಾಳೆ ಮುಂಜಾನೆ ಬಂದನಂತರ, ಇದೇ ವಿಷಯ ಕುರಿತಾದ ಚರ್ಚೆಗೆ ಮೊಟ್ಟಮೊದಲನೆಯದಾಗಿ ಅವಕಾಶ ಕಲ್ಪಿಸಿಕೊಟ್ಟು,

ಇವತ್ತು ಬಿಲ್‌ಗಳನ್ನು ಚರ್ಚೆ ಮಾಡಿ, ನಾಳೆ ಸಾಯಂಕಾಲ ಕೂಡ ಬಿಲ್‌ಗಳನ್ನು ಪಾಸ್ ಮಾಡಬಹುದು.

ಶ್ರೀ ಕೃಷ್ಣ ಬೈರೇಗೌಡ :– ಅಧ್ಯಕ್ಷರೆ, ದಯವಿಟ್ಟು ಸಮಯ ನಿಗದಿಪಡಿಸಿಬಿಟ್ಟರೆ, ಆ ಸಮಯಕ್ಕೆ ನಾವೂ ತಯಾರಾಗಿ ಬರುತ್ತೇವೆ. ಸ್ವಲ್ಪ ಅಂಕಿ–ಸಂಖ್ಯೆಗಳೆಲ್ಲವನ್ನೂ ತರುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ :– ನಿಯಮ 69ರಡಿ ತೆಗೆದುಕೊಳ್ಳುವ ಮೂಲಕ ಮತ್ತೊಂದು ಸಲ ಹೊಸ ಪದ್ಧತಿ ತರುವುದು ಬೇಡ. ನಮ್ಮಲ್ಲಿ ಯಾವ್ಯಾವ ಪ್ರಶ್ನೆಗಳಿವೆಯೋ, ಅದನ್ನೆಲ್ಲಾ ಕೇಳಿ. ಅದಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ ಹೇಳಿಸುತ್ತೇವೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ನಾಳೆ ಚರ್ಚೆಗೆ ತೆಗೆದುಕೊಳ್ಳೋಣವೆಂದು ನೀವೇ ಹೇಳುತ್ತಿದ್ದೀರಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಪ್ರಶ್ನೆಗಳನ್ನು ಕೇಳಿ. ಆದರೆ, ಚರ್ಚೆ ಬೇಡವೆಂದು ನಾವು ಅವರಿಗೆ ಹೇಳಿದೆವು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ನೀವು ಹಣ ಬಿಡುಗಡೆ ಮಾಡಿದರೆ, ಚರ್ಚೆ ಏನೂ ಬೇಕಾಗಿಲ್ಲ. ನೀವು 100 ಕೋಟಿ ಇಲ್ಲವೇ 150 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಿದರೆ, ಚರ್ಚೆ ಮಾಡುವ ಅವಶ್ಯಕತೆಯೇ ಇಲ್ಲ. 50 ಕೋಟಿ ಬದಲು ನೀವು 150 ಕೋಟಿ ಬಿಡುಗಡೆ ಮಾಡಿದರೆ ಚರ್ಚೆ ಮಾಡುವುದೇ ಬೇಡ, ಮುಗಿದುಹೋಗಿ ಬಿಡುತ್ತದೆ.

ಶ್ರೀ ಕೃಷ್ಣ ಬೈರೇಗೌಡ :–ಬರೀ ಹಣದ ಸಮಸ್ಯೆ ಮಾತ್ರವಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ಚರ್ಚೆಯ ಅವಶ್ಯಕತೆಯೇ ಇಲ್ಲ. ಭಾರಿ ಗಂಭೀರವಾದ ಸಮಸ್ಯೆ ಇದೆ. 150 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿಬಿಡಿ. ಚರ್ಚೆಯ ಅವಶ್ಯಕತೆಯೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ :– ಸಾಹೇಬರೆ, ಜನರಿಗೆ ಉದ್ಯೋಗ, ವಾರದಲ್ಲಿ ಕನಿಷ್ಠ ನಾಲ್ಕು ದಿವಸ ಉದ್ಯೋಗ ಕೊಡುತ್ತೇವೆ, ಕುಡಿಯುವ ನೀರಿಗೆ ದುಡ್ಡಿನ ಏನೂ ಸಮಸ್ಯೆಯಾಗುವುದಿಲ್ಲ, ದನ–ಕರುಗಳಿಗೆ ಮೇವಿನ ವ್ಯವಸ್ಥೆ ಮಾಡುತ್ತೇವೆ. ಈ ಮೂರು ವಿಷಯಗಳ ಬಗ್ಗೆ ನೀವು ಹೇಳಿಬಿಟ್ಟರೆ, ಚರ್ಚೆಯೇ ಬೇಕಾಗಿಲ್ಲ.

ಶ್ರೀ ಕೃಷ್ಣ ಬೈರೇಗೌಡ :– ಮಾನ್ಯ ಅಧ್ಯಕ್ಷರೆ, ಇದು ಕೇವಲ ಹಣಕ್ಕೆ ಮಾತ್ರ ಸೀಮಿತವಾಗಿರುವ ಸಮಸ್ಯೆಯಲ್ಲ. ಕೆಲವು ಊರುಗಳಲ್ಲಿ ನಾವು 8 ಕೊಳವೆ ಬಾವಿಗಳನ್ನು ಕೊರೆದರೂ, ಆ ಊರಿನಲ್ಲಿ ನೀರು ಸಿಗುತ್ತಿಲ್ಲ. ಎಲ್ಲಿಯೋ ಅಲ್ಲಿ ಇಲ್ಲಿ ಒಂದೊಂದು ಊರಿನಲ್ಲಲ್ಲ. ನಮ್ಮ ಭಾಗದ 4–5 ಜಿಲ್ಲೆಗಳಲ್ಲಿ ಸುಮಾರು ಶೇಕಡ 10–15 ರಷ್ಟು ಹಳ್ಳಿಗಳಲ್ಲಿ ನೀರು ಸಿಗುತ್ತಿಲ್ಲ. ನಮ್ಮಲ್ಲಿ ಜಾನುವಾರುಗಳ ಸಂಖ್ಯೆ ಜಾಸ್ತಿ ಇದೆ. ಈ ಎಲ್ಲಾ ಸಮಸ್ಯೆಗಳಿರುವುದರಿಂದ ಇದರ ಬಗ್ಗೆ ಸ್ವಲ್ಪ ಚರ್ಚೆಯಾದರೂ ಒಳ್ಳೆಯದು. ಏಕೆಂದರೆ, ಆಯಾ ಭಾಗಗಳಲ್ಲಿ ಏನು ಸಮಸ್ಯೆಗಳಿವೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ, ಹಣ ಕೊಡುವುದರ ಜೊತೆಗೆ, ಬೇರೆ ಏನು ವ್ಯವಸ್ಥೆ ಮಾಡಬೇಕೆಂಬುದನ್ನೂ ಸಹ ಅವರು ಯೋಚಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಎಲ್ಲಾ proposals ಸರ್ಕಾರಕ್ಕೆ ಬಂದಿದೆ. ಒಂದೊಂದು ತಾಲ್ಲೂಕಿನಿಂದಲೇ minimum ಒಂದೂವರೆ ಕೋಟಿ, ಎರಡು ಕೋಟಿಯಂತೆ ಬಂದಿದೆ. ನೀವು ಹೇಳಿರುವ ಪ್ರಕಾರ 50 ಕೋಟಿ ರೂಪಾಯಿಯನ್ನು ಕೊಟ್ಟರೆ, ರಾಜ್ಯದಲ್ಲಿ ಸುಮಾರು 128 ಬರಪೀಡಿತ ತಾಲ್ಲೂಕುಗಳೇನಿವೆ, ಅದನ್ನು ಹೊರತುಪಡಿಸಿ ಹೇಳಿರತಕ್ಕಂಥದ್ದು. ಬರಪೀಡಿತವಿರುವ 128 ತಾಲ್ಲೂಕುಗಳಲ್ಲಿ ಎಂತಹ ಪರಿಸ್ಥಿತಿ ಇರಬಹುದು? ಮಾನ್ಯ ಮುಖ್ಯಮಂತ್ರಿಗಳೆ, ನಾವು ಕಳುಹಿಸಿರತಕ್ಕಂಥ proposalನಲ್ಲಿ ಸುಮಾರು ಎರಡು ವರ್ಷಗಳಿಂದ 2 ಕೋಟಿ ರೂಪಾಯಿಗಳಷ್ಟು pending ಇದೆ. ಹಾಗಾಗಿ, ಕುಡಿಯುವ ನೀರಿಗೆ immediate ಆಗಿ ಅವರು 7, 8 ಎಂದರು. ನಮ್ಮ ತಾಲ್ಲೂಕಿನಲ್ಲಿರುವ ಸುಮಾರು 5 ಹಳ್ಳಿಗಳಿಗೆ, ಒಂದೇ ಊರಿನಲ್ಲಿ 18 ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ. ಆದರೂ ಇವತ್ತಿನವರೆಗೂ ಕುಡ ಮಲೆನಾಡು ಭಾಗದಲ್ಲಿ ಒಂದೂವರೆ ಇಂಚು, ಎರಡೂವರೆ ಇಂಚಿನಷ್ಟು ನೀರು ಇದೆ. ಆದಕಾರಣ, ದಯಮಾಡಿ ತಾವು ಅಧಿಕ ಹಣವನ್ನು ಕುಡಿಯುವ ನೀರಿಗಾಗಿ ತಕ್ಷಣವೇ ಮಂಜೂರಾತಿ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಬೆಳಗಾಂ ಅಧಿವೇಶನದಲ್ಲೇ ಚಾಮರಾಜ ನಗರಕ್ಕೆ ಇನ್ನೊಂದು ತಿಂಗಳಿನಲ್ಲಿ ಬರುವುದಾಗಿ ಹೇಳಿದ್ದೀರಿ. ಚಾಮರಾಜನಗರದಲ್ಲೆ ವಾಸ್ತವ್ಯ ಮಾಡುತ್ತೇನೆಂದು ಸಹ ಹೇಳಿದ್ದೀರಿ. ಆದರೆ ಇದುವರೆಗೂ ನಮ್ಮ ಚಾಮರಾಜನಗರ

ಜಿಲ್ಲೆಗೆ ಬಂದಿಲ್ಲ. ನಮ್ಮ ಜಿಲ್ಲೆ ಗಡಿ ಜಿಲ್ಲೆ. ಪೂರಾ ಬರಪೀಡಿತ ಪ್ರದೇಶವಾಗಿದೆ. ಯಾವಾಗ ತಾವು ಚಾಮರಾಜನಗರಕ್ಕೆ ಬರುತ್ತೀರ ಎಂದು ಅಲ್ಲಿ ಘೋಷಣೆ ಮಾಡಬೇಕು.

ಶ್ರೀ ಆರ್. ರೋಷನ್ ಬೇಗ್ :– ಚಾಮರಾಜನಗರಕ್ಕೆ ಅಕ್ಟೋಬರ್ ಆದ ಮೇಲೆ ಹೋಗುತ್ತೀರಾ!?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :– ಬರಗಾಲದ ಪರಿಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರುಗಳ ಕಳಕಳಿಯೇನಿದೆ, ಬರಗಾಲದ ವಿಚಾರದಲ್ಲಿ ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಕೆಲಸ ಮಾಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರೇನು ನಿಲುವಳಿ ಸೂಚನೆಯನ್ನು ತಂದಿದ್ದಾರೆ,. 9ನೇ ತಾರೀಖು ನಾನೇನು ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ಚರ್ಚೆ ಮಾಡಿದ್ದೇನೆ ತಕ್ಷಣವೇ ಕುಡಿಯುವ ನೀರಿಗೆ 50 ಕೋಟಿ ಹಣವನ್ನು ಬಿಡುಗಡೆ ಮಾಡಬೇಕೆಂದು ಆದೇಶ ಮಾಡಿದ್ದೇನೆಂದು ಹೇಳಲು ಬಯಸುತ್ತೇನೆ. ಕುಡಿಯುವ ನೀರು ಮತ್ತು ಕೂಲಿ ಕೆಲಸದ ವಿಷಯದಲ್ಲಿ ಎಷ್ಟೇ ಹಣದ ಅಗತ್ಯವಿದ್ದರೂ ಬಿಡುಗಡೆ ಮಾಡಲು ಸರ್ಕಾರ ಸಿದ್ಧವಿದೆ. ಇದರ ಬಗ್ಗೆ ಸದಸ್ಯರ ಕಳಕಳಿಯನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇನೆ. ರಾಜ್ಯ ಕಷ್ಟದ ಪರಿಸ್ಥಿತಿಯಲ್ಲಿ ಸರ್ಕಾರವೇನು ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಅದನ್ನು ಸರಿಯಾಗಿ ನಿರ್ವಹಿಸಲು ಸದನದಲ್ಲಿ ಆ ವಿಷಯದ ಬಗ್ಗೆ ಸ್ಪಷ್ಟೀಕರಣ ಕೊಡಲು ಬಯಸುತ್ತೇನೆ. ಮಾನ್ಯ ಸದಸ್ಯರು ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚಾಮರಾಜನಗರಕ್ಕೆ ಒಂದು ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡುವ ಬಗ್ಗೆ ನಾನೇ ಒತ್ತುಕೊಟ್ಟು ಬಜೆಟ್‌ನಲ್ಲಿ ಸೇರಿಸಿದ್ದೇನೆ. ಏಕೆಂದರೆ ಎಲ್ಲವನ್ನು ರಾಮನಗರ, ಶಿಕಾರಿಪುರಕ್ಕೆ ಮಾಡುತ್ತಾರೆ ಎಂಬ ಆಪಾದನೆಯನ್ನು ಪದೇ ಪದೇ ಕೇಳುತ್ತಿದ್ದೇನೆ. ನಮಗೆ ಮತ ಕೊಟ್ಟಿರುವ ಜನರ, ಕ್ಷೇತ್ರದ ಕೆಲಸ ಮಾಡುವಲ್ಲಿ ಸ್ವಾರ್ಥವಿರುತ್ತದೆ. ಅದು ಮನುಷ್ಯನ ಸ್ವಭಾವಕೂಡ. ಮನುಷ್ಯನಿಗೆ ಅದು ಹುಟ್ಟುಗುಣ. ಯಾರು ಏನೂ ಮಾಡಲು ಆಗುವುದಿಲ್ಲ. ಚಾಮರಾಜನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡಲು ನಿರ್ಧಾರವೇನು ಮಾಡಿದ್ದೇವೆ, ಇದೇ ತಿಂಗಳು ಚಾಮರಾಜನಗರ ಹೆಡ್‌ಕ್ವಾರ್ಟರ್‌ಗೆ ಭೇಟಿ ಕೊಡುತ್ತೇನೆ. ಅಕ್ಟೋಬರ್ ತಿಂಗಳಿನವರೆಗೆ ಕಾಯತಕ್ಕ ಪ್ರಶ್ನೆ ಇಲ್ಲ. ನಾನು ಅಧಿಕಾರ ಬಿಟ್ಟು ಹೋಗುವುದೇನಿಲ್ಲ. ಚಾಮರಾಜನಗರಕ್ಕೆ ನಾನು ಬರಬೇಕೆಂಬ ನಿಮ್ಮ ಆಸೆ ಏನಿದೆ ಅಲ್ಲಿಗೆ ಈ ತಿಂಗಳು

ಬಂದು ವಾಸ್ತವ್ಯ ಹೂಡಿ, ಚಾಮರಾಜನಗರಕ್ಕೆ ಹೋದರೆ ಅಧಿಕಾರ ಹೋಗುತ್ತದೆಂದು ಅನುಮಾನವೇನಿದೆ ಅದನ್ನು ಹೋಗಲಾಡಿಸಿ ಅಧಿಕಾರ ಶಾಶ್ವತವಾಗಿ ಉಳಿಯುತ್ತದೆ ಎಂಬ ಹೊಸ ಪ್ರತೀತಿಯನ್ನು ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ :– ನೀವು ಚಾಮರಾಜನಗರಕ್ಕೆ ಹೋದರೆ ಇಡೀ ರಾಜ್ಯಕ್ಕೆ ಒಳ್ಳೆಯ sign ಕೊಟ್ಟಂತಾಗುತ್ತದೆ. ಯಾರಿಗೋ ಏನೋ ಆದರೆ ಒಂದು ಜಿಲ್ಲೆಗೆ ಅಪಮಾನ ಮಾಡುವಂಥ ಕೆಲಸವಾಗಬಾರದು. ನಾವೆಲ್ಲರು 21ನೇ ಶತಮಾನದಲ್ಲಿದ್ದೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :– ಇದೇ ತಿಂಗಳು ಚಾಮರಾಜನಗರಕ್ಕೆ ನಾನು ಬಂದೇ ಬರುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಬರಗಾಲಕ್ಕೆ ಹಣ ಬಿಡುಗಡೆ ಮಾಡಿ ಎಂದರೆ ಚಾಮರಾಜನಗರಕ್ಕೆ ಭೇಟಿ ಕೊಡುತ್ತೇನೆಂದು ಹೇಳಿದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ :– ನಾನು ನಿನ್ನೆ ಬೆಳಿಗ್ಗೆ ದೂರವಾಣಿಯಲ್ಲಿ ನಮ್ಮ ಸಿ.ಎ.ಒ. ರವರನ್ನು ಬೋರ್‌ವೆಲ್ ಹಾಕಿಸಬೇಕು ದುಡ್ಡು ಇದೆಯೋ ಎಂದು ಕೇಳಿದೆ. ಅದಕ್ಕೆ ಅವರು ದುಡ್ಡು ಇಲ್ಲವೆಂದು ಹೇಳಿದರು. ಆದರೆ, ತಾವು ಹಣವನ್ನು ರಿಲೀಸ್ ಮಾಡಿದ್ದೇವೆಂದು ಹೇಳಿದ್ದೀರಿ. ಪಂಪು ಮತ್ತು ಮೋಟಾರ್‌ಗಳಿಗೆ scarcity ನಲ್ಲಿ ಹಣವಿಲ್ಲ. ಹಣ ಬೇಗ ಬಿಡುಗಡೆಯಾಗದಿದ್ದರೆ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– 50 ಕೋಟಿ ಕೊಟ್ಟಿರುವುದು ಸಾಕಾಗುವುದಿಲ್ಲ. 150 ಕೋಟಿಯಾದರು ಬಿಡುಗಡೆ ಮಾಡುತ್ತೇವೆಂದು ದಯವಿಟ್ಟು ಹೇಳಿ ಎಂದು ನಾವು ಕೇಳಿದ್ದು. ಕುಡಿಯುವ ನೀರಿನ ಸಮಸ್ಯೆ ಬಹಳ ಆಗಿದೆ. ತಾವು ಯಾವಾಗಲಾದರು ಹಣ ಬಿಡುಗಡೆ ಮಾಡಿ. ಆದರೆ, 150 ಕೋಟಿ ಕೊಡುತ್ತೇವೆಂದು ಹೇಳಿ. 50 ಕೋಟಿ ಸಾಕಾಗುವುದಿಲ್ಲ.

ಶ್ರೀ ಎನ್.ಎಸ್. ಬೋಸರಾಜ್ :– ಅನೇಕ ಜಿಲ್ಲೆಗಳಲ್ಲಿ ಬೋರ್‌ವೆಲ್ ಮಾಡಲು ದುಡ್ಡು ಸಿಗುತ್ತಿಲ್ಲ.

ಶ್ರೀ ಎ.ಎಸ್. ಬಸವರಾಜ್ :– ಮಾನ್ಯ ಅಧ್ಯಕ್ಷರೆ, ಹಿತ್ತಲ ಗಿಡ ಮದ್ದಲ್ಲವೆಂದು ಗಾದೆ ಇದೆ. ಮಾಜಿ ಪ್ರಧಾನಿಯವರು ಹಾಸನ ಜಿಲ್ಲೆಯವರೆ. ಲೋಕೋಪಯೋಗಿ

ಸಚಿವರೂ ಹಾಸನ ಜಿಲ್ಲೆಯವರೆ. ಮುಖ್ಯಮಂತ್ರಿಯವರೂ ಹಾಸನ ಜಿಲ್ಲೆಯವರೆ. ಅರಸೀಕೆರೆ ತಾಲ್ಲೂಕಿನ ಗರುಡನಗಿರಿಗೆ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆಂದು ವದಂತಿ ಇತ್ತು. ಗರುಡನಗಿರಿ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದರು. ಬೇರೆ ಬೇರೆ ಕಡೆಗೆ ಹೋಗುವುದಕ್ಕಿಂತ ನಮ್ಮ ಗರುಡನಗಿರಿಗೆ ಬರಬೇಕು. ಅದೊಂದೊ ಪ್ರವಾಸಿ ಕೇಂದ್ರವಾಗಿದೆ. Border ನಲ್ಲಿದೆ. ದಯವಮಾಡಿ ಮಾನ್ಯ ಮುಖ್ಯಮಂತ್ರಿಯವರು ಅರಸೀಕೆರೆಯ ಗರುಡನಗಿರಿಗೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಸ್ನೇಹಿತರೇನು ನಿಲುವಳಿ ಸೂಚನೆ ತಂದಿದ್ದಾರೆ ಅದನ್ನು ತಳ್ಳಿಹಾಕಿದ್ದೇನೆ. ಇದರ ಬಗ್ಗೆ ನಿಯಮ 69ರ ಕೆಳಗೆ ನಾಳೆ ಎರಡು ಗಂಟೆಗಳ ಕಾಲ ಚರ್ಚೆ ಮಾಡಲು ದಿನಾಂಕವನ್ನು fix ಮಾಡುತ್ತೇನೆ. ಈಗ ವಿಧೇಯಕಗಳು ಇಲ್ಲಿ pass ಆಗಿ ಮೇಲ್ಮನೆಗೆ ಹೋಗಬೇಕಾಗಿದೆ. ಆದ್ದರಿಂದ ವಿಧೇಯಕಗಳನ್ನು pass ಮಾಡಲು ಎಲ್ಲರೂ ಸಹಕರಿಸಬೇಕು. ಈಗ ಶಾಸನ ರಚನೆ. ವಿಧೇಯಕವನ್ನು ಮಂಡಿಸುವುದು.

4. <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u> :

ಅ) ವಿಷಯ : ಶಿಕ್ಷಕರ ನೇಮಕಾತಿ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಕೇಳಿದ್ದೆ. 2005–06ನೇ ಸಾಲಿನಲ್ಲಿ ಸರ್ಕಾರದವರು ಒಂದು Advertisement 4–5–2005 ರಂದು ಇದ್ದು ಅದರಲ್ಲಿ ಗರಿಷ್ಠ age ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 45 ವರ್ಷ, ಹಿಂದುಳಿದ ವರ್ಗದವರಿಗೆ 43 ವರ್ಷ, ಇತರೆಯವರಿಗೆ 40 ವರ್ಷ ಎಂದು ಇವರನ್ನು ಆಯ್ಕೆ ಮಾಡಿಬಿಟ್ಟರು. ಆ ರೀತಿ ಆಯ್ಕೆ ಮಾಡಿ appointment ಕೊಡಬೇಕಾದರೆ ಯಾರೋ ಇದು 1977 ರಲ್ಲೇನು ನೀವು C & R ನ್ನು amend ಮಾಡಿದಿರಿ ಅದರ ವಿರುದ್ಧವಾಗಿದೆಯೆಂದು Tribunal ಮುಂದೆ ಕೇಸನ್ನು ಹಾಕಿದ್ದಕ್ಕೆ ಆ ಶಿಕ್ಷಕರ appointment ನ್ನು held up ಮಾಡಿಬಿಟ್ಟರು. 2002ರಿಂದ ಇಲ್ಲಿಯವರೆಗೆ ಅಲ್ಲಿ ಆಯ್ಕೆಯಾಗಿದ್ದ ಶಿಕ್ಷಕರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟಿದ್ದಾರೆ. ನೀವೇ advertisement ಮಾಡಿ ನೀವೇ ಅವರಿಗೆ ಇಂಥ ವಯೋಮಿತಿಯವರು application ಹಾಕಿ ಎಂದು ಹೇಳಿ appointment order ನ್ನು issue ಮಾಡತಕ್ಕ ಕಾಲದಲ್ಲಿ ನೀವೇ ತಡೆದಿರುವುದು ತಪ್ಪಲ್ಲವೆ? ಸರ್ಕಾರದ ಕಾರ್ಯದರ್ಶಿಗಳು